ಪರೀಕ್ಷೆಯ ಸಮಯ. ಪ್ರಾಜೆಕ್ಟ್ ರಿಪೋರ್ಟ್ ಬರೆಯುವ ಕೆಲಸ ಬೇರೆ ಬಾಕಿ ಇತ್ತು. ಅಲ್ಲದೆ ಅವರ ಸೂಪರ್‌ವೈಸರ್ ಮಹಾಶಯ ಬಹು ಕಿರಿಕಿರಿಯ ವ್ಯಕ್ತಿ. ಪ್ರಸಾದರಿಗೆ ಒಂದಲ್ಲ ಒಂದು ಕಿರುಕುಳ ಕೊಡುತ್ತಿದ್ದರು. ಅವರ ಎಂ.ಟೆಕ್ ಡಿಗ್ರಿ ಆ ವರ್ಷವೇ ಬರುವುದು ಸಂಶಯಾಸ್ಪದವಾಗಿತ್ತು. ಮನಸ್ಸಿನಲ್ಲಿ ಕಿತ್ತಾಟ ಪ್ರಾರಂಭವಾಯಿತು. ಒಂದೆಡೆ ತಮ್ಮ ಪರೀಕ್ಷೆ ಮತ್ತು ಭವಿಷ್ಯ, ಮತ್ತೊಂದೆಡೆ ಗೀತಾ ಮತ್ತು ವೀಣಾ. ಈ ಗೀತಾಳನ್ನು ಅತ್ತ ಹಾಕಿ ತಮ್ಮ ಭವಿಷ್ಯದತ್ತ ಚಿತ್ತ ಹರಿಸಬೇಕು ಎನಿಸಿತು ಅವರಿಗೆ. ಕೂಡಲೇ ಕಾರ್ಯಶೀಲರಾಗಿದ್ದರು.

ಮನೆಯವರ ವಿನಃ ಯಾರಿಗೂ ಸುಳಿವು ಕೊಡದೆ ಅವರು ಕಾಲೇಜಿನ ಹತ್ತಿರವೇ ಇದ್ದ ತಮ್ಮ ಗೆಳೆಯನ ರೂಮಿನಲ್ಲಿ ಮೊಕ್ಕಾಂ ಹೂಡಿದರು. ಗೀತಾಳಿಂದ ದೂರವಾದರು. ಹೇಗೋ ತಪ್ಪಿಸಿಕೊಂಡರೆ ಸಾಕು ಎಂಬ ಭಾವನೆ ಪ್ರಬಲವಾಯಿತು. ತಿಂಗಳಾಗುತ್ತಿದ್ದಂತೆಯೇ ಗೀತಾಳ ತಂದೆತಾಯಿಯರಿಗೆ ದಿಗಿಲಾಯಿತು. ಭಾವಿ ಬೀಗರ ಬಳಿ ಬಂದು ವಿಚಾರಿಸಿದರು. ಇವರದು ಸಿದ್ಧ ಉತ್ತರ – “ಈ ಮದುವೆ ನೀವು ಅವನೊಡನೆ ಮಾಡಿಕೊಂಡ ಒಪ್ಪಂದ. ನಮಗೂ ಇದಕ್ಕೂ ಸಂಬಂಧವಿಲ್ಲ. ಅವನು ಎಲ್ಲೋ ರೂಂ ಮಾಡಿಕೊಂಡು ಇದ್ದಾನೆ. ನಮಗೂ ಎಲ್ಲಿ ಅಂತ ಹೇಳಿಲ್ಲ”. ಬಿಡಲಿಲ್ಲ ಅವರು. ಪ್ರಸಾದ್ ಅವರ ಸ್ನೇಹಿತರು, ಸಹಪಾಠಿಗಳು ಎಲ್ಲರನ್ನೂ ಕಂಡು ಮಾತನಾಡಿದರು. ಪ್ರಸಾದರ ಆಪ್ತ ಸ್ನೇಹಿತ ಗೋವಿಂದ ವಿಷಯ ತಿಳಿದುಕೊಂಡು ಎಲ್ಲಕಡೆ ಪ್ರಸಾರ ಮಾಡಿದ. ಕೂಡಲೇ ಗೀತಾಳ ತಂದೆತಾಯಿ ಧಾವಿಸಿ ಬಂದರು. ಪ್ರಸಾದ್ ಆಗ ರೂಮಿನಲ್ಲಿ ಇರಲಿಲ್ಲ. ಅವರ ಕಾಲೇಜಿಗೆ ಫೋನ್ ಮಾಡಲೆತ್ನಿಸಿದರು. ಫಲಿಸಲಿಲ್ಲ. ಸರಿ, ಕಾಲೇಜಿಗೇ ಹುಡುಕಿಕೊಂಡು ಬಂದರು. ಇದ್ದೂ ಇಲ್ಲ ಎನಿಸಿಕೊಂಡರು ಪ್ರಸಾದ್. ಗೀತಾಳಿಗೆ ಗೋವಿಂದನ ಮೂಲಕ ವೀಣಾಳ ವಿಷಯವೂ ತಿಳಿಯಿತು. ಕೂಡಲೇ ಪ್ರಸಾದರ ಬಗ್ಗೆ ಕತೆಗಳನ್ನು ಹೆಣೆದು ಹರಡಲೆತ್ನಿಸಿದಳು. ಪ್ರಸಾದರ ಸ್ನೇಹಿತರ ಮೂಲಕ ಸಂದೇಶ ಮತ್ತು ಎಚ್ಚರಿಕೆಗಳನ್ನು ಕಳುಹಿಸಿದರು. ಜಗ್ಗಲಿಲ್ಲ ಈತ. ಒಂದು ದಿನ ಬಿಡದೆ, ಗೀತಾ ಅವರ ಕಾಲೇಜಿನ ಬಳಿ ಬಂದು ಅವರಿಗಾಗಿ ಎರಡು ಗಂಟೆಗಳ ಕಾಲ ಕಾದು ನಿಂತಳು. ಎಲ್ಲಿಂದಲೋ ಬರುತ್ತಿದ್ದ ಪ್ರಸಾದ್ ತಪ್ಪಿಸಿಕೊಳ್ಳಲಾಗಲಿಲ್ಲ. ಅವರನ್ನು ನಿಲ್ಲಿಸಿ ಕೇಳಿದಳು: “ಏಕೆ ಹೀಗೆ ಆಡ್ತಾ ಇದೀರಾ? ಮದುವೇನ ಕ್ಯಾನ್ಸಲ್ ಮಾಡ್ತೀರಾ? ನಾನು ಏನು ತಪ್ಪು ಮಾಡಿದೀನಿ ಹೇಳಿ?” ಉತ್ತರ – “ನಾನು ತುಂಬಾ ಬಿಸಿ ಆಗಿದ್ದೀನಿ. ಸ್ವಲ್ಪ ದಿನ ಬಿಟ್ಟು ನಾನೇ ಬಂದು ನೋಡುತ್ತೇನೆ”.

ಆ ದಿನ ಕೊನೆಗೂ ಬರಲಿಲ್ಲ. ಆದರೆ ಎರಡು ತಿಂಗಳ ನಂತರ ಗೀತಾ ಮತ್ತೆ ಬಂದು ಕೇಳಿದಳು, “ಇನ್ನೆಷ್ಟು ದಿನಾ ಅಂತ ತಡೀಬೇಕು ನಾನು? ಉಂಟು, ಇಲ್ಲ ಉತ್ತರ ಹೇಳಿ ನೀವು. ಇನ್ನು ಕಾಯುವುದು ನನಗೆ ಆಗದ ಕೆಲಸ. ನಾನು ಮುಂದಿನದನ್ನು ನೋಡಿಕೊಳ್ಳಬೇಕಾಗಿದೆ”. ಅವಳ ನೇರಮಾತನ್ನು ಕೇಳಲು ಈತ ಸಿದ್ಧನಿರಲಿಲ್ಲ. “ಹಾಗಾದರೆ ನನಗೆ ಈ ಮದುವೆ ಬೇಕಾಗಿಲ್ಲ. ನೀನು ಏನು ಬೇಕಾದರೂ ಮಾಡಬಹುದು” ಎಂದು ಒಡ್ಡಾಗಿ ನುಡಿದುಬಿಟ್ಟರು. ಅನೇಕ ಜನ ಅವರಿಬ್ಬರನ್ನು ಕುತೂಹಲದಿಂದ ನೋಡುತ್ತಿದ್ದರು. ಅವಳು ಸುಮ್ಮನಿರಲಿಲ್ಲ. “ನನಗೆ ಚೆನ್ನಾಗಿ ಗೊತ್ತು. ನೀವು ಆ ವೀಣಾ ಹಿಂದೆ ಬಿದಿದ್ದೀರ. ನನ್ನನ್ನು ಡಿಚ್ ಮಾಡಿದ್ದೀರ” ಎಂದು ಗೋಳಾಡಿ ಅಳುತ್ತಾ ಅಲ್ಲಿಂದ ತೆರಳಿದ್ದಳು. ಇವರು ಬಾಯಿಮಾತಿಗೂ ಸಮಾಧಾನ ಮಾಡಲಿಲ್ಲ. ಅವಳು ಆಟೋ ಮಾಡಿಕೊಂಡು ಮನೆಗೆ ಹಿಂದಿರುಗಿದ್ದಳು.

ಸಂಬಂಧವೇನೋ ಕಡಿದುಹೋಯಿತು. ಪ್ರಸಾದರು ಗೆದ್ದೆ ಅಂದುಕೊಂಡರು. ಆದರೆ ಅವರ ಸ್ನೇಹಿತರು ಅವರ ವರ್ತನೆಯನ್ನು ಖಂಡಿಸಿದರು. “ಹಾಗೆ ಅವಳನ್ನು ಅಂದು ಕಳಿಸುವ ಅಗತ್ಯವಿರಲಿಲ್ಲ. ಮದುವೆ ಬೇಡದೇ ಹೋದರೆ ಅವರ ಮನೆಗೆ ಹೊಗಿ ಹಿರಿಯರ ಹತ್ತಿರ ಮಾತನಾಡಿ ಏನೋ ಕಾರಣಕೊಟ್ಟು ಕ್ಷಮೆ ಕೇಳಬೇಕಾಗಿತ್ತು. ನೀವು ಮಾಡಿದ್ದು ಹೇಡಿಯ ಕೆಲಸ. ಸಂಭಾವಿತರು